

ಪೋಷಕರೇ ನಿಮ್ಮ ಮಕ್ಕಳ ಮಾನಸಿಕ ಬಳವಣಿಗೆಯಲ್ಲಿ ಅಸಹಜತೆ ಕಂಡು ಬರುತ್ತಿದೆಯೇ? ನಿಮ್ಮ ಸಮಸ್ಯೆಗಳಿಗೆ ಆತಂಕಗಳಿಗೆ ಮನೋವಿಜ್ಞಾನಿ **ಡಾ. ಅ. ಶ್ರೀಧರ** ಅವರು ಉತ್ತರಿಸುತ್ತಾರೆ.

ನನ್ನ ಮಗನಿಗೆ 19 ವರ್ಷ. ಹತ್ತನೇ ತರಗತಿಯವರೆಗೆ ಸರ್ಕಾರಿ ಶಾಲೆಯಲ್ಲಿ ಓದಿದ. ಹೆಚ್ಚಿನ ಅಂಕಗಳು ಬರದಿದ್ದರೂ, ಓದಿನಲ್ಲಿ ಆಸಕ್ತಿ ಇದೆ ಎನ್ನುವ ಕಾರಣದಿಂದಾಗಿ ವಾಣಿಜ್ಯ ವಿಷಯದಲ್ಲಿ ಪದವಿಪೂರ್ವ ತರಗತಿಗೆ ಸೇರಿಕೊಂಡ. ಮೊದಲ ವರ್ಷ ತೇರ್ಗಡೆಯಾದ. ಎರಡನೇ ವರ್ಷದಲ್ಲಿ ಒಂದು ವಿಷಯದಲ್ಲಾದರೂ 10 ಅಂಕಗಳಿಗಿಂತ ಹೆಚ್ಚು ಬರಲಿಲ್ಲ. ವಾಣಿಜ್ಯ ವಿಷಯದಲ್ಲಿ ಆಸಕ್ತಿ ಇಲ್ಲ, ಅದು ನನಗೆ ಕಷ್ಟ, ಡಿಪ್ಲೊಮೊ ಮಾಡುತ್ತೇನೆ ಎಂದು ಸಿವಿಲ್ ಸೇರಿಕೊಂಡಿದ್ದಾನೆ. ಈಗ ಅದೂ ಕಷ್ಟವಾಗಿದೆ, ಡಿ.ಎಡ್ ಸೇರುವೆ ಎಂದು ಹಠ ಹಿಡಿದಿದ್ದಾನೆ. ನಾನು ಗ್ರಾಮಾಂತರ ಶಾಲೆಯಲ್ಲಿ ಶಿಕ್ಷಕಿ. ಅವನಲ್ಲಿ ಕಲಿಯುವ ಶಕ್ತಿ ಕಡಿಮೆಯಾಗಿದೆ ಎನ್ನುವುದೇ ನನ್ನ ಭಾವನೆ. ಆದರೆ, ಅವನ ಒತ್ತಾಯ ತಡೆಯಲಾಗುತ್ತಿಲ್ಲ. ಮುಂದೇನು ನಿರ್ಧಾರ ತೆಗೆದುಕೊಳ್ಳಬೇಕು ಎನ್ನುವುದು ತಿಳಿಯುತ್ತಿಲ್ಲ. ಅವನ ಹಠಕ್ಕೆ ಮಣಿದು ಮತ್ತೊಂದು ಅವಸರದ ಹೆಜ್ಜೆ ಇಡುವುದಕ್ಕೆ ಮುಂಚೆ ನಿಮ್ಮ ಸಲಹೆಯ ಅಗತ್ಯವಿದೆ. ನನ್ನ ಮೊದಲನೆಯ ಪ್ರಶ್ನೆ: ನಮ್ಮ ಹುಡುಗನ ಶೈಕ್ಷಣಿಕ ಬಯಕೆ ಮತ್ತು ಸಾಮರ್ಥ್ಯಕ್ಕೆ ಸಂಬಂಧವಿದೆಯೇ? ಎರಡನೆಯದು: ಡಿ.ಎಡ್ ವಿಷಯದಲ್ಲೂ ಹಿಂದಿನ ರೀತಿಯ ವರ್ತನೆಯನ್ನು ತೋರಿಸುವುದಿಲ್ಲ ಎಂದು ಅಂದಾಜು ಮಾಡುವುದು ಹೇಗೆ? ಹಾಗೆಯೇ ಅವನಲ್ಲಿರುವ ಆಸಕ್ತಿಗಳನ್ನು ಸರಿಯಾದ ರೀತಿಯಲ್ಲಿ ಗುರುತಿಸಲು ಸಾಧ್ಯವಿದೆಯೆ?

–ಉಮಾ ಗೋವಿಂದಯ್ಯ, ಗುಂಡ್ಲುಪೇಟೆ

ನಿಮ್ಮ ಹುಡುಗನಲ್ಲಿ ಕಂಡುಬಂದಿರುವ ಶೈಕ್ಷಣಿಕ ಹಿನ್ನಡೆಗೆ ಹಲವಾರು ಕಾರಣಗಳು ಇರಬಹುದು. ಶಿಕ್ಷಕಿಯಾದ ನೀವು ಅವುಗಳತ್ತ ಹೆಚ್ಚಿನ ಗಮನ ಹರಿಸುವುದರಿಂದ ಅವನ ಶೈಕ್ಷಣಿಕ ಆಸೆ ಮತ್ತು ಮುನ್ನಡೆಯ ಅಂದಾಜು ಸಿಗಬಲ್ಲದು. ಶಾಲಾ ಶಿಕ್ಷಣದ ಹಿನ್ನೆಲೆಯನ್ನು ಗಮನಿಸಿದರೆ ಅವನು ಕಲಿತ ವಿಷಯಗಳು ಮತ್ತು ಅದರಲ್ಲಿ ಪಡೆದಿರುವುಂತಹ ಮಟ್ಟವು ಒಂದು ಹಂತದ ಅಂದಾಜನ್ನು ಸೂಚಿಸಿದೆ. ಅನುತ್ತೀರ್ಣವಾಗಿರುವ ವಾಣಿಜ್ಯ ವಿಷಯ ಮತ್ತು ಭಾಷಾ ಕಲಿಕೆ ಅವನ ಸಾಮರ್ಥ್ಯಕ್ಕೆ ಮೀರಿದ್ದಿರಬಹುದು. ಹಾಗಿಲ್ಲದಿದ್ದೇ ಸರಿಯಾದ ಶ್ರಮ ಮತ್ತು ಪ್ರಯತ್ನಪಟ್ಟಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಚೆನ್ನಾಗಿ ಓದಲಿಲ್ಲ, ಸರಿಯಾಗಿ ತರಗತಿಗೆ ಹೋಗಲಿಲ್ಲ ಎನ್ನುವುದನ್ನು ಹೊರತು ಪಡಿಸಿ ಅವನ ಕಲಿಕೆಯ ಮಟ್ಟವನ್ನು ಗುರುತಿಸಲು ಸಾಧ್ಯವಿದೆ. ವಿಷಯ ಬೋಧಕರನ್ನು ಭೇಟಿಮಾಡಿ ಇದನ್ನು ತಿಳಿದುಕೊಳ್ಳಬಹುದು. ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಕ್ಕೆ ಬೇಕಾದ ಸಿದ್ಧತೆ ಮತ್ತು ಪಟ್ಟ ಶ್ರಮವೂ ಸಹ ಕಲಿಕೆಯ ಸಾಮರ್ಥ್ಯವನ್ನು ತಿಳಿಸಿಕೊಡ ಬಲ್ಲದು. ಜೊತೆಗೆ ಹಾಜರಾತಿ ರೀತಿಯು ಒಂದು ಉತ್ತಮ ಸೂಚನೆ. ತಪ್ಪದೆ ತರಗತಿಗಳಿಗೆ ಹಾಜರಾಗುವುದು ವಿದ್ಯಾರ್ಥಿಗಳಲ್ಲಿರುವ ಕಲಿಕೆಯ ಬಯಕೆಯನ್ನು ಸೂಚಿಸುತ್ತದೆ. ಇನ್ನು ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು. ಅವು ನಿಜ ಸಾಮರ್ಥ್ಯದ ಸೂಚನೆ ಆಗಿರದಿದ್ದರೂ ಅವನಿಗೆ ಪರೀಕ್ಷೆಯ ಮಹತ್ವ ಮತ್ತು ಅದನ್ನು ಎದುರಿಸುವ ವಿಧಾನಗಳ ಬಗ್ಗೆ ಅರಿವಿರುವುದನ್ನು ತಿಳಿಸುತ್ತದೆ. ಇವುಗಳನ್ನು ಕೂಲಂಕಷವಾಗಿ ಪರಿಶೀಲಿಸುವುದರ ಮೂಲಕ ಅವನ ಶೈಕ್ಷಣಿಕ ಅಭ್ಯುದಯದ ಬಗ್ಗೆ ಅರಿವು ಮೂಡಿಸಿಕೊಳ್ಳಲು ಸಾಧ್ಯ. ಇದರೊಂದಿಗೆ ಸದ್ಯದ ಪರಿಸ್ಥಿತಿಯಲ್ಲಿ ಅವನ ಹಠಮಾರಿ ತನಕ್ಕೆ ಮಣಿದು ಶಿಕ್ಷಣದ ದಾರಿಯತ್ತ ದೂಡುವುದು ಸರಿಯಲ್ಲವೆನಿಸುತ್ತದೆ. ಶಿಕ್ಷಣವನ್ನು ಪಡೆದುಕೊಳ್ಳುವ ಆಸಕ್ತಿಯೊಂದಿಗೆ, ಸಾಮರ್ಥ್ಯ ಮತ್ತು ಪರಿಶ್ರಮವೂ ಬೇಕಾಗುತ್ತದೆ. ಇವುಗಳ ಕೊರತೆ ಅವನಲ್ಲಿದೆಯೆನ್ನುವುದನ್ನು ತಿಳಿಪಡಿಸಿ.

ನನ್ನ ಮಗನಿಗೆ ಈಗ 29 ವರ್ಷ. ಪುಣೆಯಲ್ಲಿ ಕಂಪ್ಯೂಟರ್ ಎಂಜಿನಿಯರ್ ಆಗಿದ್ದಾನೆ. ಶಿಕ್ಷಣದ ಎಲ್ಲಾ ಮಟ್ಟದಲ್ಲಿಯೂ ಉತ್ತಮ ಅಂಕಗಳನ್ನು ಗಳಿಸಿದ್ದು ದೇಶವಿದೇಶಗಳನ್ನು ಸುತ್ತಿ ಬಂದಿದ್ದಾನೆ. ಎಂಜನಿಯರಿಂಗ್ ಓದುತ್ತಿದ್ದ ಸಮಯದಲ್ಲಿ ಆತ್ಮೀಯವಾಗಿದ್ದ ಗೆಳತಿಯೊಬ್ಬಳನ್ನೇ ಮೂರು ವರ್ಷಗಳ ಹಿಂದೆ ಶಾಸ್ತ್ರೋಕ್ತವಾಗಿ ಮದುವೆಯಾದ. ಈ ವಿವಾಹವು ಹೆಚ್ಚು ದಿನ ಉಳಿಯಲಿಲ್ಲ. ವರ್ಷದ ಹಿಂದೆ ವಿಚ್ಛೇದನವೂ ಆಯಿತು. ಇತ್ತೀಚೆಗೆ ಮನೆಯಲ್ಲಿ ದೇವತಾ ಕಾರ್ಯಕ್ಕೆ ಬಂದವನು ಅವಳನ್ನು ಎಲ್ಲೋ ಭೇಟಿಯಾಗಿದ್ದ. ಅದಾದ ನಂತರದಿಂದ ಅವಳನ್ನು ಮರೆಯಲು ಸಾಧ್ಯವಿಲ್ಲ. ಕೆಲಸಕ್ಕೆ ರಾಜೀನಾಮೆ ಕೊಟ್ಟು ಊರಿನಲ್ಲಿಯೇ ಇರುತ್ತೇನೆ. ಹೇಗಾದರೂ ಮಾಡಿ ಆಕೆಯ ಮನಸ್ಸನ್ನು ಗೆಲ್ಲುತ್ತೇನೆ ಎಂದೆಲ್ಲಾ ಹೇಳುತ್ತಿದ್ದಾನೆ. ಅವನಿಗೆ ತಿಳುವಳಿಕೆ ಹೇಳುವಷ್ಟು ಶಕ್ತಿ ನನ್ನಲ್ಲಿಲ್ಲ (ಅವನು ಸಣ್ಣವನಿದ್ದಾಗಲೇ ಅವರಮ್ಮ ತೀರಿಕೊಂಡರು). ಈಗ ಅವನ ಮನಸ್ಸನ್ನು ಬದಲಾಯಿಸುವ ಮಾರ್ಗ ಯಾವುದು ಎಂದು ತಿಳಿಯುತ್ತಿಲ್ಲ. ದಯಮಾಡಿ ಅವನಿಗೆ ಯಾವ ರೀತಿಯಲ್ಲಿ ತಿಳುವಳಿಕೆ ಮೂಡಿಸಬೇಕೆನ್ನುವುದನ್ನು ತಿಳಿಸಿ.

–ಮಹಾಂತೇಶ, ಚಿತ್ರದುರ್ಗ

ಇಂತಹ ವಿಷಯಗಳಲ್ಲಿ ಎಚ್ಚರಿಕೆಯಿಂದ ಇರಬೇಕಾಗುತ್ತದೆ ಎನ್ನುವುದನ್ನು ನಿಮ್ಮ ಮಗನಿಗೆ ತಿಳಿಸುವ ಅಗತ್ಯವಿದೆ. ಅವನಿಂದ ದೂರವಾದ ವ್ಯಕ್ತಿಯನ್ನು ಮತ್ತೊಮ್ಮೆ ಹಿಡಿದು ತಂದಿರಿಸಿಕೊಳ್ಳುವ ಪ್ರಯತ್ನಗಳ ಬದಲು ಮತ್ತೊಂದು ವಿವಾಹದತ್ತ ಮನಸ್ಸು ಮಾಡುವುದನ್ನು ಹುರಿದುಂಬಿಸಿ. ಎಲ್ಲಕ್ಕಿಂತಲೂ ಮುಖ್ಯವಾಗಿ ಬಿಟ್ಟು ಹೋದ ವ್ಯಕ್ತಿಯನ್ನು ಸಂಪಾದಿಸಲು ಕೆಲಸ ಕಳೆದುಕೊಳ್ಳುವುದು ಸರಿಯಾದ ಆಲೋಚನೆಯಲ್ಲ. ಮೊದಲು ಕೆಲಸದತ್ತ ಗಮನ ಹರಿಸಲಿ. ಅವರಿಬ್ಬರ ನಡುವೆ ಇದ್ದಂತಹ ಅನ್ಯಮನಸ್ಕತೆಯನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳುವುದು ಒಳ್ಳೆಯದು. ವಿಚ್ಛೇದನ ಪಡೆದು ದೂರವಿರುವ ಆ ವ್ಯಕ್ತಿಯ ಮೂಲಕವೇ ನಡೆದ ವಿದ್ಯಮಾನಗಳ ಬಗ್ಗೆ ಸರಿಯಾದ ಮಾಹಿತಿಯನ್ನು ಪಡೆದುಕೊಳ್ಳಲು ಸಾಧ್ಯವೇ, ಆಲೋಚಿಸಿ. ಅವನಿಗೆ ತೃಪ್ತಿ ತರುವಂತಹದ್ದನ್ನೇ ಮಾಡಬಲ್ಲರಿ ಎನ್ನುವ ಭರವಸೆಯನ್ನು ಮೂಡಿಸಿ. ಜೊತೆಗೆ ಕೆಲಸವನ್ನು ಬಿಡದಂತೆ ಮಾಡಿ. ಸಾಧ್ಯವಾದರೆ ಅವನೊಂದಿಗೆ ನೀವು ಕೂಡ ಹೋಗುವುದು ಒಳ್ಳೆಯದು. ಇದಲ್ಲದೆ ಹಿರಿಯರು, ಹಿತೈಷಿಗಳು ಮತ್ತು ವಕೀಲರೊಂದಿಗೆ ಚರ್ಚಿಸಿ ತೀರ್ಮಾನಕ್ಕೆ ಬರುವುದೇ ಉತ್ತಮ ಮಾರ್ಗ. ಅದಕ್ಕೆ ಕಾಲಾವಕಾಶ ಬೇಕು ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿ.

ನನ್ನ ಮಗಳು ಎರಡನೇ ಪಿಯು ಓದುತ್ತಿದ್ದಾಳೆ. ಇತ್ತೀಚಿನ ಕೆಲ ದಿನಗಳಿಂದ ಅವಳ ಸ್ವಭಾವದಲ್ಲಿ ತುಂಬಾ ಬದಲಾವಣೆಯಾದಂತೆ ಕಂಡುಬಂದಿದೆ. ಸದಾ ಮೊಬೈಲ್ ಸಂಭಾಷಣೆಯಲ್ಲಿರುತ್ತಾಳೆ. ಮತ್ತು ಮನೆಯ ಆಚಾರವಿಚಾರಗಳ ಬಗ್ಗೆ ಕೊಂಚವೂ ಗೌರವವಿಲ್ಲ. ಕೆಲ ದಿನಗಳ ಹಿಂದೆ ಅವಳ ಚೀಲದಲ್ಲಿ ಸಿಗರೇಟು ಇತ್ತು. ವಿಚಾರಿಸಿದಾಗ ಯಾರೋ ಗೆಳೆಯರು ಕೀಟಲೆಗೆಂದೇ ಹಾಕಿದ್ದಾರೆ ಎಂದು ಬಾಯಿ ಮುಚ್ಚಿಸಿದ್ದಳು. ಆದರೆ, ಅವಳು ಸಿಗರೇಟು ಸೇದುತ್ತಾಳೆ ಎಂದು ನೋಡಿದವರು ಮತ್ತು ಸಹಪಾಠಿಗಳು ಹೇಳಿದ್ದಾರೆ. ಕದ್ದುಮುಚ್ಚಿ ಮಧ್ಯಾಹ್ನವೇ ಬೀಯರ್ ಸೇವಿಸುತ್ತಾಳೆ ಎನ್ನುವುದು ಗೊತ್ತಾಗಿದೆ. ಈ ವಿಷಯ ಕಾಲೇಜಿನವರಿಗೆ ಗೊತ್ತಾದರೆ ಬಹುಶಃ ಅವಳನ್ನು ತರಗತಿಯಿಂದ ಹೊರಹಾಕಬಹುದು. ಅವಳು ಬಹಳ ಸೂಕ್ಷ್ಮ ಸ್ವಭಾವದ ವಳು. ಅವಳೊಂದಿಗೆ ಗಟ್ಟಿಯಾಗಿ ಮಾತಾಡುವುದು ಕಷ್ಟ. ಈಗ ತಕ್ಷಣದಲ್ಲಿ ನಾನೇನು ಮಾಡಬೇಕು ಎನ್ನುವುದನ್ನು ದಯಮಾಡಿ ತಿಳಿಸಿಕೊಡಿ.

–ರಾಮೇಶ್ವರಿ, ಬೆಂಗಳೂರು

ಅವಳಲ್ಲಿ ದುಶ್ಚಟಗಳು ಬಲವಾಗುವುದಕ್ಕೆ ಮುಂಚಿತವಾಗಿ ಕೆಲವೊಂದು ಕಠಿಣ ಕ್ರಮಗಳನ್ನು ಅನುಸರಿಸಲೇ ಬೇಕಾಗುತ್ತದೆ. ಅವಳ ಹೊಸ ದುರಭ್ಯಾಸಗಳ ಬಗ್ಗೆ ಸರಿಯಾದ ಮಾಹಿತಿಯನ್ನು ಪಡೆದುಕೊಳ್ಳಿ. ಅವಳ ಆತ್ಮೀಯ ಗೆಳೆಯರಲ್ಲಿ ದುಶ್ಚಟವಿಲ್ಲದವರನ್ನು ಗುರುತಿಸಿ ಅವರ ಸಹಕಾರ ಪಡೆಯುವುದು ಸರಿಯಾದ ಕ್ರಮ. ನಿಮ್ಮ ಮಗಳು ಜೊತೆಗಾರರ ಒತ್ತಡ, ಆಮಿಷಗಳಿಗೆ ಸಿಕ್ಕಿಕೊಂಡಿರುವ ಸಾಧ್ಯತೆಗಳಿವೆಯೇ ತಿಳಿದುಕೊಳ್ಳಿ. ಅಂತಹವರ ಬಗ್ಗೆ ಕಾಲೇಜಿನವರಿಗೆ ಮಾಹಿತಿ ನೀಡುವುದರಲ್ಲಿ ತಪ್ಪಿಲ್ಲವೆನಿಸುತ್ತದೆ. ಮುಖ್ಯವಾಗಿ ನಿಮ್ಮ ಮಗಳ ವರ್ತನೆಯು ತಕ್ಷಣದಲ್ಲಿ ಬದಲಾಗುವುದಕ್ಕೆ ಮನೆಯ ವಾತಾವರಣವೇನಾದರೂ ಕಾರಣವೇ ಎನ್ನುವುದನ್ನು ತಿಳಿಯಬೇಕಾಗಿದೆ. ಅರ್ಥವಿಲ್ಲದ ಆಚಾರ, ಸಂಪ್ರದಾಯಗಳ ಹೆಸರಲ್ಲಿ ಹದಿಹರೆಯದ ಮಕ್ಕಳನ್ನು ಹಿಂಸಿಸುವ ಹಿರಿಯರು, ಕುಟುಂಬ ನಿಮ್ಮದಲ್ಲವೆನ್ನು ವುದನ್ನು ಖಾತರಿ ಮಾಡಿಕೊಳ್ಳಿ. ಅವಳ ಶೈಕ್ಷಣಿಕ ಆಸಕ್ತಿ, ಸಾಮರ್ಥ್ಯಗಳ ವಿರುದ್ಧ ದಂತಹ ನಿರ್ಧಾರವೇನಾದರೂ ತೆಗೆದುಕೊಂಡಿದ್ದಲ್ಲಿ ಅವುಗಳನ್ನು ಸರಿಪಡಿಸುವುದರತ್ತ ಗಮನ ಹರಿಸಿ. ಹಾಗೆಯೇ, ಅವಳೊಂದಿಗೆ ಹೆಚ್ಚು ಸಮಯ ಕಳೆಯಿರಿ. ಅವಳ ಮೇಲೆ ಅನಗತ್ಯವೆನ್ನುವಂತಹ ಒತ್ತಾಯಗಳು ಹೇರುವುದು ಬೇಡ. ಓದು ಮತ್ತು ಸಹಪಾಠಿಗಳಿಂದ ಏನಾದರೂ ತೊಂದರೆ ಆಗುತ್ತಿದೆಯೇ ಎನ್ನುವುದನ್ನು ಅವಳ ಬಾಯಿಂದಲೇ ತಿಳಿದುಕೊಳ್ಳುವುದರ ಮೂಲಕ ಸಮಸ್ಯೆಯ ಒಳನೋಟ ಸಿಗಬಹುದು.

ನಿಮ್ಮ ಪ್ರಶ್ನೆಗಳನ್ನು ಕಳುಹಿಸಬೇಕಾದ ವಿಳಾಸ: ಸಂಪಾದಕರು, 'ಸುಧಾ', 'ನನ್ನ ಮಗು ಹೀಗೇಕೆ?' ವಿಭಾಗ, 75, ಎಂಜಿ. ರಸ್ತೆ, ಬೆಂಗಳೂರು-560001, ಮೊಬೈಲ್ 9880937122